ಈ ಯೋಜನೆಯ ಅನುಷ್ಠಾನದಿಂದಾಗಿ ಹೈದರಬಾದ್ ಕರ್ನಾಟಕ ಪ್ರದೇಶ, ವಿಶೇಷವಾಗಿ ಬೀದರ್ ಜಿಲ್ಲೆಗೆ ಕೆಳಕಂಡ ಪ್ರಯೋಜನಗಳಾಗಲಿವೆ.

1. ಇದುವರೆವಿಗೆ ವಿದ್ಯುದೀಕರಣಗೊಳ್ಳದೆ ಇರುವ ಗ್ರಾಮಾಂತರ ವಸತಿ ಪ್ರದೇಶಗಳಿಗೆ ಮುಖ್ಯವಾಗಿ ದಲಿತ ಬಸ್ತಿಗಳು, ಆಶ್ರಯ ಕಾಲೋನಿಗಳು, ತಾಂಡಾಗಳು ಇತ್ಯಾದಿಗಳಿಗೆ ವಿದ್ಯುತ್ ಮೂಲಭೂತ ಸೌಕರ್ಯಗಳನ್ನು ಒದಗಿಸಿ ವಿದ್ಯುದೀಕರಣಗೊಳಿಸಲಾಗುವುದು.

2. ಎಲ್ಲಾ ಗ್ರಾಮೀಣ ಮನೆಗಳಿಗೆ ವಿಶೇಷವಾಗಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

3. ವಿದ್ಯುತ್ ವಿತರಣಾ ವ್ಯವಸ್ಥೆಯಲ್ಲಿನ ಸುಧಾರಣಾ ಕ್ರಮಗಳಿಂದ, ವಿದ್ಯುತ್ ಸರಬರಾಜಿನಲ್ಲಿನ ವೋಲ್ಟೇಜ್ ಮತ್ತು ಗುಣಮಟ್ಟ ಸುಧಾರಣೆಗೊಳ್ಳುತ್ತದೆ.

4.ವಿದ್ಯುತ್ ಅಡಚಣೆಗಳು ಗಣನೀಯ ಪ್ರಮಾಣದಲ್ಲಿ ಇಳಿಮುಖಗೊಳ್ಳುತ್ತವೆ.

5. ವಿದ್ಯುತ್ ವಿತರಣಾ ನಷ್ಟವೂ ಕಡಿಮೆಗೊಳ್ಳುತ್ತದೆ.

436 (741) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಒಂದು ವರ್ಷದಿಂದ ಇಂದಿನವರೆವಿಗೆ ಲೋಕಾಯುಕ್ತರು ಎಷ್ಟು ದಾಳಿಗಳನ್ನು ಕೈಗೊಂಡಿದ್ದಾರೆ (ಇಲಾಖಾವಾರು ಧಾಳಿಗೊಳಗಾದ ಸಿಬ್ಬಂದಿ/ ಅಧಿಕಾರಿಗಳ ಹೆಸರು ಹಾಗೂ ಅವರುಗಳಿಂದ ವಶಪಡಿಸಿಕೊಂಡ ಹಣ/ ಇತರೆ ದಾಖಲೆಗಳ ಪೂರ್ಣ ವಿವರಗಳನ್ನು ಒದಗಿಸುವುದು);

ಆ) ದಾಳಿಗೊಳಗಾದವರ ಬಗ್ಗೆ ಲೋಕಾಯುಕ್ತರು ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ವರದಿ ಸಲ್ಲಿಸಿರುವುದು ನಿಜವೇ ಹಾಗಿದ್ದಲ್ಲಿ ಯಾವಾಗ ಇದನ್ನು ಸಲ್ಲಿಸಲಾಯಿತು ಈ ಪೈಕಿ ಎಷ್ಟು ಜನರು ಯಾವ ಯಾವ ಶಿಸ್ತಿನ ಕ್ರಮಕ್ಕೆ ಒಳಗಾಗಿದ್ದಾರೆ;

ಇ) ಲೋಕಾಯುಕ್ತರ ಕ್ರಮದ ಬಗ್ಗೆ ಶಿಫಾರಸ್ಸು ಮಾಡಿದ್ದರೂ ಸಹ ಇದುವರೆವಿಗೂ ಕ್ರಮ ಕೈಗೊಳ್ಳದೇ ಇರುವ ಪ್ರಕರಣಗಳ ಸಂಖ್ಯೆ ಎಷ್ಟು (ವಿವರಗಳನ್ನು ಒದಗಿಸುವುದು);

ಈ) ಲೋಕಾಯುಕ್ತರು ಶಿಫಾರಸ್ಸು ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು):

ಅ) ಕರ್ನಾಟಕ ಲೋಕಾಯುಕ್ತ ಪೋಲೀಸ್ ವಿಭಾಗವು ಕಳೆದ ಒಂದು ವರ್ಷದಲ್ಲಿ 40 ಧಾಳಿಗಳನ್ನು ನಡೆಸಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಆ) ಮೇಲ್ಕಂಡ 40 ಪ್ರಕರಣಗಳು ಲೋಕಾಯುಕ್ತ ಪೋಲೀಸು ವಿಭಾಗದಲ್ಲಿ ತನಿಖೆಯ ಹಂತದಲ್ಲಿವೆ.

ಇ) ಯಾವುದೇ ಶಿಫಾರಸ್ಸನ್ನು ಮಾಡಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅನುಬಂಧ

1.	ಶ್ರೀ /ಶ್ರೀಮತಿ ಕೆ.ಎಸ್.ಲಿಂಗೇಗೌಡ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮಂಗಳೂರು ಸಿಟಿ ಕಾರ್ಪೊರೇಷನ್, ಮಂಗಳೂರು.	2.	ಶ್ರೀ /ಶ್ರೀಮತಿ ಎಂ.ಮಂಜುನಾಥ ನಾಯಕ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು.
3.	ಕೃಷ್ಣಪ್ಪ, ಕಮಾಂಡೆಂಟ್, 7ನೇ ಬೆಟಾಲಿಯನ್, ಕೆಎಸ್ಆರ್‌ಪಿ, ಮಂಗಳೂರು.	4.	ಅಣ್ಣಾರಾವ್, ಸ್ಟೋರ್‌ಕೀಪರ್, ಬೆಣ್ಣೆತೊರೆ ನೀರಾವರಿ ಯೋಜನೆ, ಗುಲ್ಬರ್ಗಾ.
5.	ಎಸ್.ವಿ.ರಮೇಶ್, ಸಹಾಯಕ ಇಂಜಿನಿಯರ್, ಮೆಕ್ಯಾನಿಕಲ್ ವಿಭಾಗ, ನೀರಾವರಿ ಇಲಾಖೆ, ಯರಮರಸ್, ರಾಯಚೂರು.	6.	ಜಿ.ಆರ್.ದೇವರಾಜು, ಕಾರ್ಯಪಾಲಕ ಇಂಜಿನಿಯರ್, ನಂ.2, ಜಡ್‌ಪಿಇ ಉಪ ವಿಭಾಗ, ಮಧುಗಿರಿ.
7.	ಹೆಚ್.ಪಿ.ಲಕ್ಷ್ಮೀನಾರಾಯಣ, ಸಹಾಯಕ ವಿಭಾಗೀಯ ವ್ಯವಸ್ಥಾಪಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ, ಕಡಬ, ದಕ್ಷಿಣ ಕನ್ನಡ ಜಿಲ್ಲೆ.	8.	ಬಿ.ಹೆಚ್.ಸಿದ್ದಪ್ಪ, ಸಹಾಯಕ ಆಯುಕ್ತರು, ಹಾವೇರಿ ಸಬ್ ಡಿವಿಜನ್, ಹಾವೇರಿ.
9.	ಕೆ.ಗೋಪಾಲ ರೆಡ್ಡಿ, ಕೃಷಿ ಅಧಿಕಾರಿ, ಕಾಡಾ, ಬಳ್ಳಾರಿ.	10.	ಸಿ.ಆರ್.ಸುಧಾಕರ್, ಸಹಾಯಕ ಟಾಸ್ಕ್ ಫೋರ್ಸ್ ಕಮೆಂಡೆಂಟ್ ಭೂಸೇನೆ, ಕೂಡ್ಲಿಗಿ.
11.	ಎಂ.ಎಸ್.ಸಿದ್ದರಾಮೇಗೌಡ, ಉಪ ನಿರ್ದೇಶಕರು, ಕರ್ನಾಟಕ ಭೂಸೇನಾ ನಿಗಮ, ಚಾಮರಾಜನಗರ.	12.	ಟಿ.ತಿರುಮಲ್ಲೇಗೌಡ, ಗ್ರಾಮ ಲೆಕ್ಕಿಗ, ದೊಡ್ಡಗದ್ದಳ್ಳಿ ವೃತ್ತ, ಸಾಲಗಾಮೆ ಹೋಬಳಿ, ಹಾಸನ.

13.	ಆರ್.ಬಿ.ಪಾಟೀಲ್ ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ, ನಿಪ್ಪಾಣಿ, ಬೆಳಗಾವಿ ಜಿಲ್ಲೆ.	**14.**	ಎಂ.ಆರ್.ಮಾದಹಳ್ಳಿ, ಸಹಾಯಕ ಕೃಷಿ ಅಧಿಕಾರಿ, ವಾಟರ್‌ಷೆಡ್ ಅಭಿವೃದ್ಧಿ ಕಛೇರಿ, ಮುಂಡರಗಿ, ಗದಗ ಜಿಲ್ಲೆ.
15.	ಕೆ. ಹನುಮಂತರೆಡ್ಡಿ, ಕಿರಿಯ ಇಂಜಿನಿಯರ್, ಜಿಲ್ಲಾ ಪಂಚಾಯತ್, ರಾಣಿಬೆನ್ನೂರು, ಹಾವೇರಿ ಜಿಲ್ಲೆ.	**16.**	ಆರ್.ಹೆಚ್.ಹಮಗಟ್ಟಿ, ಕಿರಿಯ ಇಂಜಿನಿಯರ್, ತಾಲ್ಲೂಕು, ಪಂಚಾಯತ್, ರಾಣಿಬೆನ್ನೂರು, ಹಾವೇರಿ ಜಿಲ್ಲೆ.
17.	ಆರ್.ಜಿ. ಗಡ್ಡದ, ಸಹಾಯಕ ನಿರ್ದೇಶಕರು, ಕರ್ನಾಟಕ ಭೂಸೇನಾ ನಿಗಮ, ಬಿಜಾಪುರ.	**18.**	ಕೆ.ಬಿ.ಗುಂಜಿಕರ್, ಸಬ್ ರಿಜಿಸ್ಟಾರ್, ನಿಪ್ಪಾಣಿ, ಬೆಳಗಾವಿ ಜಿಲ್ಲೆ.
19.	ಹೆಚ್. ಸಿ. ಚಪ್ಪಣ್ಣಮಠ, ಸರ್ವೆ ಸೂಪರ್‌ವೈಸರ್, ಶಿರಹಟ್ಟಿ, ಗದಗ ಜಿಲ್ಲೆ.	**20.**	ಎನ್. ಕೃಷ್ಣಪ್ಪ, ಉಪ ಪೋಲೀಸ್ ಅಧೀಕ್ಷಕರು, ದೊಡ್ಡಬಳ್ಳಾಪುರ ಸಬ್-ಡಿವಿಜನ್.
21.	ಮುಕುಂದ ಕೃಷ್ಣೇಗೌಡ. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ತುಮಕೂರು.	**22.**	ಹೆಚ್.ಕೆ.ರಂಗಸ್ವಾಮಿ, ಜಿಲ್ಲಾ ವ್ಯವಸ್ಥಾಪಕರು, ಎಸ್‌ಸಿ/ಎಸ್‌ಟಿ ಅಭಿವೃದ್ಧಿ ನಿಗಮ ತುಮಕೂರು.
23.	ಭೈಚಪ್ಪ, ಕಾರ್ಯದರ್ಶಿ, ಹಾರಹಳ್ಳಿ ಗ್ರಾಮ ಪಂಚಾಯತ್ ಮತ್ತು ಹರವಿ ಗ್ರಾಮ ಪಂಚಾಯತ್, ಶ್ರೀನಿವಾಸಪುರ ತಾಲ್ಲೂಕು	**24.**	ಮೀರ್ ಆರಿಫ್ ಅಲಿ, ಪೋಲೀಸ್ ನಿರೀಕ್ಷಕರು, ಕೋರಮಂಗಲ, ಬೆಂಗಳೂರು.
25.	ಡಾ: ಹೆಚ್.ವಿ.ಕೃಷ್ಣಸ್ವಾಮಿ, ಜನರಲ್ ಮ್ಯಾನೇಜರ್, ಕೆಎಸ್‌ಎಫ್‌ಸಿ, ಬೆಂಗಳೂರು	**26**	ಪಿ.ರಂಗಸ್ವಾಮಿ, ವಾಣಿಜ್ಯ ತೆರಿಗೆ ಅಧಿಕಾರಿ, ಬೆಂಗಳೂರು (ಗ್ರಾ).
27.	ಜಿ.ಎಸ್.ಭಟ್, ಜನರಲ್ ಮ್ಯಾನೇಜರ್ (ಫೈನಾನ್ಸ್), ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್, ಬೆಂಗಳೂರು.	**28.**	ಬಿ.ಬೋರಯ್ಯ, ವಿಶೇಷ ತಹಸೀಲ್ದಾರ್, ಪೂರ್ವ ತಾಲ್ಲೂಕು. ಕೆ.ಆರ್.ಪುರಂ. ಬೆಂಗಳೂರು.

29.	ಎನ್.ನಾರಾಯಣಸ್ವಾಮಿ, ಪೋಲೀಸ್ ನಿರೀಕ್ಷಕರು, ವಿ.ಐ.ಪಿ. ಸೆಕ್ಯೂರಿಟಿ, ಬೆಂಗಳೂರು.	**30.**	ಕೆ. ಆಂಜಿನಪ್ಪ, ನಿರ್ದೇಶಕರು (ಮಾರ್ಕೆಟಿಂಗ್), ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್, ಬೆಂಗಳೂರು.
31.	ಟಿ.ಸಿ. ರಾಮಕೃಷ್ಣ, ತೆರಿಗೆ ನಿರೀಕ್ಷಕರು, ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನಗರ.	**32.**	ಬಿ.ಟಿ. ಲಕ್ಷ್ಮಣ್, ಚೀಫ್ ಜನರಲ್ ಮ್ಯಾನೇಜರ್, ಎಂ.ಎಂ.ಎಲ್., ಎಂ.ಜಿ.ರಸ್ತೆ, ಬೆಂಗಳೂರು.
33.	ದೇವಾನಂದ ಬಾಬು, ವಾಣಿಜ್ಯ ತೆರಿಗೆ ಅಧಿಕಾರಿ.	**34**	ಆರ್. ರಂಗನಾಥ್, I/C ಮುಖ್ಯ ಇಂಜಿನಿಯರ್, ಬೆಂಗಳೂರು ಮಹಾನಗರ ಪಾಲಿಕೆ (ದಕ್ಷಿಣ), ಬೆಂಗಳೂರು
35.	ಶಮೀ–ಉರ್–ರೆಹಮಾನ್, ಪೋಲೀಸ್ ನಿರೀಕ್ಷಕರು, ಸಿ.ಸಿ.ಬಿ., ಬೆಂಗಳೂರು.	**36.**	ಜೆ.ಆರ್.ನಾರಾಯಣರೆಡ್ಡಿ, ಗ್ರಾಮ ಲೆಕ್ಕಿಗ, ತರಬನಹಳ್ಳಿ, ಜಾಲ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು.
37.	ಸಿ.ಆರ್.ನಾರಪ್ಪ, ಕಿರಿಯ ಇಂಜಿನಿಯರ್, ಕಾವೇರಿ ಅತಿಥಿ ಗೃಹ, ಪ್ಯಾಲೇಸ್ ರಸ್ತೆ, ಬೆಂಗಳೂರು.	**38.**	ಗಂಗಾಧರಯ್ಯ, ಸಹಾಯಕ ವಾಣಿಜ್ಯ ತೆರಿಗೆ ಆಯುಕ್ತರು (ವಿಎಟಿ), ಧಾರವಾಡ.
39.	ಎಂ.ಸಿ.ಪ್ರಕಾಶ್, ಕಾರ್ಯಪಾಲಕ ಇಂಜಿನಿಯರ್, ಭಾರತಿನಗರ ವಿಭಾಗ, ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.	**40.**	ಶಿವಣ್ಣ, ಪೊಲೀಸ್ ನಿರೀಕ್ಷಕರು, ಯಶವಂತಪುರ ಪೋಲೀಸ್ ಠಾಣೆ, ಬೆಂಗಳೂರು ನಗರ.